# ಕರ್ನಾಟಕ ವಿಧಾನ ಪರಿಷತ್ತು

1] ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2580

2] ಮಾನ್ಯ ಸದಸ್ಯರ ಹೆಸರು : ಶ್ರೀಮತಿ ಎಸ್.ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು)

3] ಉತ್ತರಿಸುವ ದಿನಾಂಕ : 24/03/2022

4] ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೊಡಗು ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಹೊಸದಾಗಿ ಎಷ್ಟು ಪೊಲೀಸ್ ಠಾಣೆಗಳನ್ನು ಸೃಜಿಸಲಾಗಿದೆ; ಅಥವಾ ಮೇಲ್ದರ್ಜೆಗೇರಿಸಲಾಗಿದೆ; (ವಿವರ ನೀಡುವುದು) | ಕೊಡಗು ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಹೊಸದಾಗಿ ಯಾವುದೇ ಪೊಲೀಸ್ ಠಾಣೆಗಳನ್ನು ಸೃಜಿಸಿರುವುದಿಲ್ಲ.<br>ಆದರೆ, ಕಳೆದ ಮೂರು ವರ್ಷಗಳಲ್ಲಿ ಕೊಡಗು ಜಿಲ್ಲೆಯ ಈ ಕೆಳಕಂಡ 03 ಪೊಲೀಸ್ ಠಾಣೆಗಳನ್ನು ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ/107/ಪಿಓಪಿ/2020, ದಿ:23.11.2020, ಹೆಚ್‌ಡಿ/57/ಪಿಓಪಿ/2021, ದಿನಾಂಕ: 13.05.2021 ಮತ್ತು ಹೆಚ್‌ಡಿ/58/ಪಿಓಪಿ/2021, ದಿನಾಂಕ: 13.05.2021ರನ್ವಯ ಪಿ.ಐ. ಪೊಲೀಸ್ ಠಾಣೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿರುತ್ತದೆ.<br>1) ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆ<br>2) ಸೋಮವಾರಪೇಟೆ ಪೊಲೀಸ್ ಠಾಣೆ ಮತ್ತು<br>3) ಶನಿವಾರಸಂತೆ ಪೊಲೀಸ್ ಠಾಣೆ |
| ಆ) | ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಹೊಸದಾಗಿ ಸೃಜಿಸಿದ ಅಥವಾ ಮೇಲ್ದರ್ಜೆಗೇರಿಸಲಾದ ಎಲ್ಲಾ ಪೊಲೀಸ್ ಠಾಣೆಗಳಿಗೆ ಅಗತ್ಯ ಕಛೇರಿಗಳು ಹಾಗೂ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆಯೇ; (ವಿವರ ನೀಡುವುದು) | ಪಿ.ಐ. ಪೊಲೀಸ್ ಠಾಣೆಯನ್ನಾಗಿ ಮೇಲ್ದರ್ಜೆಗೇರಿಸಲಾದ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆ, ಸೋಮವಾರಪೇಟೆ ಪೊಲೀಸ್ ಠಾಣೆ ಮತ್ತು ಶನಿವಾರಸಂತೆ ಪೊಲೀಸ್ ಠಾಣೆಗಳಿಗೆ ಸ್ವಂತ ಕಟ್ಟಡಗಳಿದ್ದು ಸುಸ್ಥಿತಿಯಲ್ಲಿರುತ್ತದೆ ಮತ್ತು ಅಗತ್ಯ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಪೀಠೋಪಕರಣಗಳು, ಸ್ಥಿರ ದೂರವಾಣಿ ಮತ್ತು ಶೌಚಾಲಯಗಳನ್ನು ಕಲ್ಪಿಸಲಾಗಿದೆ. |
| ಇ) | ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಹೊಸದಾಗಿ ಸೃಜಿಸಿದ ಅಥವಾ ಮೇಲ್ದರ್ಜೆಗೇರಿಸಲಾದ ಎಲ್ಲಾ ಪೊಲೀಸ್ ಠಾಣೆಗಳಿಗೆ ಪೂರ್ಣ ಪ್ರಮಾಣದಲ್ಲಿ ಸಿಬ್ಬಂದಿಗಳು ಹಾಗೂ ಅಧಿಕಾರಿಗಳನ್ನು ನಿಯುಕ್ತಿಗೊಳಿಸಲಾಗಿದೆಯೇ; (ವಿವರ ನೀಡುವುದು) | ಕೊಡಗು ಜಿಲ್ಲೆಯಲ್ಲಿ ಕಳೆದ 03 ವರ್ಷದಲ್ಲಿ ಮೇಲ್ದರ್ಜೆಗೇರಿಸಲಾದ ಪೊಲೀಸ್ ಠಾಣೆಗಳಿಗೆ ಈ ಕೆಳಕಂಡಂತೆ ಅಧಿಕಾರಿ/ಸಿಬ್ಬಂದಿಗಳನ್ನು ನಿಯುಕ್ತಿಗೊಳಿಸಲಾಗಿರುತ್ತದೆ. |

| ಕ್ರ ಸಂ | ಪೊಲೀಸ್ ಠಾಣೆ | ಮಂಜೂರಾತಿ ಬಲ | ಹಾಲಿ ಬಲ | ಖಾಲಿ ಇರುವ ಹುದ್ದೆ |
|---|---|---|---|---|
| 1. | ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆ | ಪಿಎಸ್‌ಐ–4<br>ಎಎಸ್‌ಐ–6<br>ಹೆಚ್‌ಸಿ–13<br>ಪಿಸಿ–33 | ಪಿಎಸ್‌ಐ–2<br>ಎಎಸ್‌ಐ–6<br>ಹೆಚ್‌ಸಿ–13<br>ಪಿಸಿ–30 | ಪಿಎಸ್‌ಐ–02<br>ಎಎಸ್‌ಐ–00<br>ಹೆಚ್‌ಸಿ–00<br>ಪಿಸಿ–03 |
| 2. | ಸೋಮವಾರಪೇಟೆ ಪೊಲೀಸ್ ಠಾಣೆ | ಪಿಎಸ್‌ಐ–04<br>ಎಎಸ್‌ಐ–05<br>ಹೆಚ್‌ಸಿ–12<br>ಪಿಸಿ–23 | ಪಿಎಸ್‌ಐ–01<br>ಎಎಸ್‌ಐ–05<br>ಹೆಚ್‌ಸಿ–12<br>ಪಿಸಿ–21 | ಪಿಎಸ್‌ಐ–03<br>ಎಎಸ್‌ಐ–00<br>ಹೆಚ್‌ಸಿ–00<br>ಪಿಸಿ–02 |
| 3. | ಶನಿವಾರಸಂತೆ ಪೊಲೀಸ್ ಠಾಣೆ | ಪಿಎಸ್‌ಐ–02<br>ಎಎಸ್‌ಐ–05<br>ಹೆಚ್‌ಸಿ–10<br>ಪಿಸಿ–20 | ಪಿಎಸ್‌ಐ–01<br>ಎಎಸ್‌ಐ–05<br>ಹೆಚ್‌ಸಿ–10<br>ಪಿಸಿ–19 | ಪಿಎಸ್‌ಐ–01<br>ಎಎಸ್‌ಐ–00<br>ಹೆಚ್‌ಸಿ–00<br>ಪಿಸಿ–01 |

| | | |
|---|---|---|
| ಈ) | ಈ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಯಾವ ಕಾಲಮಿತಿಯೊಳಗೆ ತುಂಬಲಾಗುವುದು? | ದಕ್ಷಿಣ ವಲಯ ವ್ಯಾಪ್ತಿಯಲ್ಲಿ ಈಗಾಗಲೇ ಒಟ್ಟು 50 ಪಿ.ಎಸ್.ಐ. (ಸಿವಿಲ್) ರವರುಗಳು ಪ್ರಾಯೋಗಿಕ ತರಬೇತಿಯನ್ನು ಪಡೆಯುತ್ತಿರುತ್ತಾರೆ. ಅಲ್ಲದೇ 127 ಪಿ.ಎಸ್.ಐ. (ಸಿವಿಲ್) ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಎಲ್ಲಾ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ಕೊಡಗು ಜಿಲ್ಲೆಯಲ್ಲಿ ಲಭ್ಯವಿರುವ ರಿಕ್ತಸ್ಥಾನವನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.<br><br>ಕೊಡಗು ಜಿಲ್ಲಾ ಘಟಕದಲ್ಲಿ ಖಾಲಿ ಇರುವ 55–ಸಿ.ಪಿ.ಸಿ. ಹುದ್ದೆಗಳ ನೇಮಕಾತಿಗಾಗಿ ಅಧಿಸೂಚನೆ ಹೊರಡಿಸಲಾಗಿದ್ದು, ಈಗಾಗಲೇ ಅಭ್ಯರ್ಥಿಗಳ ವೈದ್ಯಕೀಯ ಪರೀಕ್ಷೆ ಹಾಗೂ ದಾಖಲಾತಿ ಪರಿಶೀಲನೆಯು ಮುಕ್ತಾಯಗೊಂಡು ಅವರುಗಳ ದಾಖಲಾತಿಗಳ ನೈಜತೆ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಗೆ ಪತ್ರ ಬರೆಯಲಾಗಿದ್ದು, ಅವರಿಂದ ವರದಿ ಬಂದ ಬಳಿಕ ನೇಮಕಾತಿ ಆದೇಶ ಹೊರಡಿಸಿ ಅವರುಗಳನ್ನು ಪಿ.ಸಿ. ಹುದ್ದೆಯ ಖಾಲಿ ಇರುವ ಠಾಣೆಗಳಲ್ಲಿ ನಿಯುಕ್ತಿಗೊಳಿಸಲಾಗುವುದು. |

**ಸಂಖ್ಯೆ: ಹೆಚ್‌ಡಿ 59 ಪಿಓಪಿ 2022**

(ಆರಗ ಜ್ಞಾನೇಂದ್ರ)
ಗೃಹ ಸಚಿವರು.